## ಕಲ್ಪನೆ ಕಾವ್ಯ



# ಹೊಸ ಟ್ರೆಂಡ್ ಶುರುಮಾಡ್ತೀನಲ್ಲ!

ಇರೋದೆಲ್ಲಾ ಇನ್ನೊಬ್ರಿಗೆ ಕೊಡ್ತೀಯಲ್ಲ
ಚೂರೂ ಗೊತ್ತಾಗೊಲ್ವಾ ನಿಂಗೆ?
ಒಂದೂ ಗೊಂಬೆ ಕೊಡೋಲ್ವಲ್ಲ
ಸಿಟ್ ಬರೋಲ್ವಾ ನಂಗೆ?

ಬೊಂಬೆ ಮಾರಿದ್ರೇನೇ ಸಿಗೋದು
ಊಟ ತಿಂಡಿ ಬಟ್ಟೆ...
ಹಾಗಂತ ಆಸೆ ತಡ್ಕೊಳ್ಳೋದು
ಉರಿಸದೆ ಇರುತ್ತೆಯೇ ಹೊಟ್ಟೆ?
ನಾನೊಬ್ಬನೇ ಆಟ ಆಡ್ಕೊಳ್ಳೋಕೆ
ಬಿಡೋದೇ ಇಲ್ಲ ನೀನು
ಕೃಷ್ಣನ ಒರಳಿಗೆ ಕಟ್ಟಾಕ್ದಂಗೆ
ಹಗ್ಗವ ಸುತ್ತುತ್ತಿ ಏನು?

ನಂಗೇ ವ್ಯಾಪಾರ ವಹಿಸಿಕೊಟ್ರೆ
ಮಾರುತ್ತೀನಿ ನೋಡು ಎಲ್ಲಾ
ಸಂಜೆಯ ಒಳಗೇ ಖಾಲಿಮಾಡಿ
ತುಂಬಿಸಿ ಬಿಡ್ತೀನಿ ಗಲ್ಲಾ!
ಹಳೇ ಬ್ಯುಸಿನೆಸ್ ಟೆಕ್ನಿಕ್ಕೆಲ್ಲಾ
ಈ ಜನಕ್ಕೆ ಅರ್ಥವಾಗೋದಿಲ್ಲ
ಆನ್‌ಲೈನ್ ಬಿಟ್ಟು ಬರೋಹಾಗೆ
ಹೊಸ ಟ್ರೆಂಡ್ ಶುರುಮಾಡ್ತೀನಲ್ಲ!

**ಬೇದ್ರೆ ಮಂಜುನಾಥ**

# ಸಾಕ್ಷಾತ್ಕಾರ

ಗಿರಿಗಿರಿ ತಿರುಗುವ ಗಿರಿಗಿಟ್ಲೆ ಆಡಲು
ಬೇಕೆಂಬ ಮಗುವಿನ ಹಂಬಲ
ಮಗುವಿಗೆ ತಿಳಿದಿದೆ ಇಂದೂ ಸಿಗದೆಂದು
ಆದರೂ ಕೈ ಚಾಚಿದೆ ತಾಯಿ ಕಡೆ
ಮಣಿಸರಗಳ ಸಾಲುಗಳನೇಕ
ತಾರೆಗಳಂತೆ ಮಿನುಗಿದರೂ
ಅವೆಲ್ಲ ತನಗಲ್ಲವೆಂದು ತಿಳಿದರೂ
ಕೈ ಚಾಚಿದೆ ಪುಟ್ಟ ಮಗು ಆಸೆಯಿಂದ
ಮಗುವಿನ ಭವಿಷ್ಯದ ಚಿಂತೆ ತಾಯಿಗೆ
ಬರಲಿರುವ ನಾಳೆಗಾಗಿ ಇಂದಿನಿಂದ
ನಕ್ಷತ್ರಗಳಷ್ಟು ಹಣ ಸಂಗ್ರಹಿಸಿಡಬೇಕಿದೆ
ಸಿಕ್ಕುಗಳನೆಲ್ಲ ಬಿಡಿಸಿ ಬದುಕ ಕಟ್ಟಬೇಕಿದೆ
ಸಿಂಗಾರದ ಚಕ್ರಗಳಿಗೆ ಜೋತು ಬಿದ್ದ
ಸುಮಗಳಿಗೆಲ್ಲ ಜೀವ ಕೊಡಬೇಕಿದೆ
ಗಿರಿಗಿಟ್ಲೆಗಳಂತೆ ಮುದ ನೀಡುವ ಸುಂದರ
ಬದುಕಿನ ಸಾಕ್ಷಾತ್ಕಾರವಾಗಬೇಕಿದೆ

**ಬಿ.ಡಿ.ಕುಲಕರ್ಣಿ**